# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 946 |
| ಸದಸ್ಯರ ಹೆಸರು | : ಶ್ರೀ ಅರವಿಂದಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 12.03.2020 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿರುವ ಶಾಹೀನ ಶಿಕ್ಷಣ ಸಂಸ್ಥೆಯಲ್ಲಿ ನಡೆದ ನಾಟಕ ಪ್ರದರ್ಶನಕ್ಕೆ ಹಾಕಲಾದ ದೇಶದ್ರೋಹ ಪ್ರಕರಣ ಸರಿಯೇ; ಸರಿಯಿದ್ದರೆ ಅದು ಹೇಗೆ; ಒಂದು ವೇಳೆ ತಪ್ಪು ಪ್ರಕರಣ ಪೊಲೀಸರಿಂದ ದಾಖಲಿಸಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮವೇನು? | ದಿನಾಂಕ 26-01-2020 ರಂದು ಶ್ರೀ ನಿಲೇಶ ರಕ್ಷಾಳ, ಸಾಮಾಜಿಕ ಕಾರ್ಯಕರ್ತರು, ಬೀದರ್ ರವರು ನೂತನ ನಗರ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಸಾರಾಂಶದ ಮೇರೆಗೆ ಶಾಹೀನ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ನಾಟಕ ಪ್ರದರ್ಶನದಲ್ಲಿ ದೇಶದ ಮೇಲೆ ದ್ವೇಷ ಭಾವನೆ ಬರುವಂತಹ ಹಾಗೂ ಎರಡು ಕೋಮುಗಳ ಮಧ್ಯೆ ಭಯಭೀತಿ ಉಂಟು ಮಾಡಿ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಕೃತ್ಯದ ಘಟನೆ ಜರುಗಿದೆ ಎಂದು ದೂರನ್ನು ನೀಡಿದ್ದು, ದೂರಿನ ಘಟಕಾಂಶಗಳ ಆಧಾರದ ಮೇಲೆ ಅಪರಾಧ ಸಂಖ್ಯೆ: 10/2020 ಕಲಂ. 504, 505(2), 124(ಎ), 153(ಎ), ಜೊತೆ 34 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ತನಿಖೆಯು ಪ್ರಗತಿಯಲ್ಲಿದ್ದು, ಇದೊಂದು ದೇಶದ್ರೋಹ ಪ್ರಕರಣವೇ ಅಥವಾ ಅಲ್ಲವೇ ಎಂಬುದು ತನಿಖೆಯಿಂದ ದೃಢಪಡಬೇಕಾಗಿದ್ದು, ಪ್ರಸ್ತುತ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.<br><br>ಸದರಿ ಪ್ರಕರಣವನ್ನು ಪೊಲೀಸ್ ಅಧಿಕಾರಿಗಳು ಕಾನೂನಿನ ನಿಯಮಾನುಸಾರ ನಿರ್ವಹಿಸಿದ್ದು, ಯಾವುದೇ ಕರ್ತವ್ಯ ಲೋಪವನ್ನು ಎಸಗಿರುವುದಿಲ್ಲ. |

**ಹೆಚ್‌ಡಿ 90 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು